**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.</u>**

**<u>ಸಿ.ಸಿ.ನಂ.465/2026</u>**

**ಪಿರ್ಯಾದಿ** : ರಾಜ್ಯ ಸರ್ಕಾರ,
ಕುಟ್ಟ ಪೊಲೀಸ್ ಠಾಣೆ.

**ವಿರುದ್ದ**

**ಆರೋಪಿ** : ಶ್ರೀ ಮುಕ್ಕಾಟ್ಟೀರ ಎಮ್.ಕಾವೇರಪ್ಪ,
ತಂದೆಃ ಪೌತಿ ಮುತ್ತಣ್ಣ,
ಪ್ರಾಯ 54 ವರ್ಷ
ವಾಸಃ ಬಣ್ಣಮೊಟ್ಟೆ, ನಾಲ್ಕೇರಿ ಗ್ರಾಮ,
ನಾಲ್ಕೇರಿ ಅಂಚೆ, ಕೊಡಗು.

**<u>ಆರೋಪಣೆ</u>**

ಶ್ರೀ ಶ್ರೀನಾಥ್ ಎ,. ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ

ದಿನಾಂಕಃ 15.03.2026 ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ ಕುಟ್ಟ ಪೋಲೀಸ್ ಠಾಣಾ ಸರಿಹದ್ದಿಗೆ ಸೇರಿದ ನಾಲ್ಕೇರಿ ಗ್ರಾಮದ ಬಣ್ಣಮೊಟ್ಟೆಯಲ್ಲಿ ಸಾರ್ವಜನಿಕ ರಸ್ತೆಗೆ ಒತ್ತಾಗಿರುವ ಆರೋಪಿಯಾದ ತಮ್ಮ ಭಾಪ್ತು ಅಂಗಡಿಯಲ್ಲಿ ಆರೋಪಿಯಾದ ನೀವು ಸಾರ್ವಜನಿಕರಿಗೆ ಕಾಣುವ ರೀತಿಯಲ್ಲಿ ಸರ್ಕಾರದ ಯಾವುದೇ ಪರವಾನಗಿ ಇಲ್ಲದೆ 90ml ನ Amruts Silver Cup Rare Indian Brandy ಯ 2 ಮದ್ಯ ತುಂಬಿದ ಟೆಟ್ರಾ ಪ್ಯಾಕೆಟ್‌ಗಳು ಮತ್ತು 1 ಖಾಲಿ ಟೆಟ್ರಾ ಪ್ಯಾಕೇಟ್, ಒಂದು ಪ್ಲಾಸ್ಟಿಕ್ ಲೋಟ ಮತ್ತು ಒಂದು ಅರ್ಧ ಲೀಟರಿನ ಖಾಲಿ ಇರುವ ಒಂದು ನೀರಿನ ಪ್ಲಾಸ್ಟಿಕ್ ಬಾಟಲ್ ಅನ್ನು ತಮ್ಮ ವಶದಲ್ಲಿಟ್ಟುಕೊಂಡು ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಅಕ್ರಮವಾಗಿ ಮದ್ಯವನ್ನು ಕುಡಿಯಲು ಅನುವು ಮಾಡಿ ಕೊಟ್ಟಿರುತ್ತೀರಿ. ಆದ್ದರಿಂದ ಆರೋಪಿಯಾದ ನೀವು ಕಲಂ 15(ಎ) ಮತ್ತು 32(3) ಕೆ.ಇ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

**<u>ಆರೋಪಿಯ ಹೇಳಿಕೆ</u>**

ಪ್ರಶ್ನೆ ಸಂಖ್ಯೆಃ 1 ಇದೀಗ ಓದಿ ಹೇಳಿದ ಆರೋಪಣೆಯು ನಿಮಗೆ ಅರ್ಥವಾಯಿತೇ?

ಉತ್ತರಃ ಅರ್ಥವಾಯಿತು.

ಪ್ರಶ್ನೆ ಸಂಖ್ಯೆ 2: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಬಯಸುವಿರಾ ?

ಉತ್ತರಃ ತಪ್ಪಾಯಿತು, ದಂಡ ಕಟ್ಟುತ್ತೇನೆ.

ಮೇಲ್ಕಂಡ ಎಲ್ಲಾ ಆಪಾಧನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

ಸ್ಥಳಃ ಪೊನ್ನಂಪೇಟೆ,

ದಿಃ11-06-2026

Sd/-

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ

ಪೊನ್ನಂಪೇಟೆ.